ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 18/02/2020

## ಕೇಂದ್ರ ಸರ್ಕಾರಕ್ಕೆ 3 ತಿಂಗಳ ಗಡುವು ನೀಡಿದ ಸುಪ್ರೀಂಕೋರ್ಟ್

# ಸೇನೆಗೆ ಸ್ತ್ರೀ ಕಮಾಂಡ್

ರಾಷ್ಟ್ರಪತಿ, ಪ್ರಧಾನಿ, ರಾಜ್ಯಪಾಲರಂತಹ ಪರಮೋಚ್ಚ ಸಾಂವಿಧಾನಿಕ ಹುದ್ದೆ ನಿಭಾಯಿಸಿರುವ ಮಹಿಳೆಯರಿನ್ನು ಭಾರತೀಯ ಸೇನೆಯಲ್ಲೂ ಮಿಂಚುವ ದಿನ ದೂರದಲ್ಲಿಲ್ಲ. ಭೂಸೇನೆಯ ಪರ್ಮನೆಂಟ್ ಕಮಿಷನ್ ಮೂಲಕ ದೀರ್ಘಕಾಲ ಸೇನೆಯಲ್ಲಿ ಸೇವೆ ಸಲ್ಲಿಸಲು ಮಹಿಳೆಯರಿಗೂ ಸಮಾನ ಅವಕಾಶ ಇರಬೇಕೆಂಬ ದೆಹಲಿ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿರುವ ಸುಪ್ರೀಂ, ಸೇನೆಯ ಉನ್ನತ ಹುದ್ದೆಗೆ ಮಹಿಳೆಯರನ್ನೂ ಪರಿಗಣಿಸುವಂತೆ ಸೂಚಿಸಿದೆ.

ವಿಜಯವಾಣಿ ಸುದ್ದಿಜಾಲ ನವದೆಹಲಿ

ದೀರ್ಘಕಾಲ ಭಾರತೀಯ ಭೂಸೇನೆಯ ಪರ್ಮನೆಂಟ್ ಕಮಿಷನ್ ಮೂಲಕ ದೀರ್ಘಕಾಲ ಸೇನೆಯಲ್ಲಿ ಸೇವೆ ಸಲ್ಲಿಸಲು ಪುರುಷರಂತೆ ಮಹಿಳೆಯರಿಗೂ ಸಮಾನ ಅವಕಾಶವಿರಬೇಕು ಎಂಬ 2010ರ ದೆಹಲಿ ಹೈಕೋರ್ಟ್ ತೀರ್ಪನ್ನು ಎತ್ತಿಹಿಡಿದಿರುವ ಸುಪ್ರೀಂಕೋರ್ಟ್, ಲಿಂಗ ಸಮಾನತೆಗೆ ಸಂಬಂಧಿಸಿದಂತೆ ಮತ್ತೊಂದು ಐತಿಹಾಸಿಕ ತೀರ್ಪು ಪ್ರಕಟಿಸಿದೆ.

ಇದುವರೆಗೆ ಸೀಮಿತ ವಿಷಯಗಳಲ್ಲಷ್ಟೇ ಮಹಿಳಾಧಿಕಾರಿಗಳು ಪರ್ಮನೆಂಟ್ ಕಮಿಷನ್ ಮೂಲಕ ಸೇನೆಯಲ್ಲಿ ಕರ್ತವ್ಯ ಮುಂದುವರಿಸಬಹುದಾಗಿತ್ತು. ಕೇಂದ್ರ ಸರ್ಕಾರ ಇದಕ್ಕಾಗಿ ನಿರ್ದಿಷ್ಟ ನಿಯಮಾವಳಿಗಳನ್ನೂ ರೂಪಿಸಿತ್ತು. ಮಹಿಳಾ ಅಧಿಕಾರಿಗಳಿಗೆ ಸೀಮಿತ ಅವಕಾಶ ಒದಗಿಸುವ ಈ 'ಸಾಂಪ್ರದಾಯಿಕ ನಿಯಮ'ಗಳನ್ನು ರದ್ದುಗೊಳಿಸಿರುವ ನ್ಯಾ. ಡಿ.ವೈ. ಚಂದ್ರಚೂಡ್ ಮತ್ತು ನ್ಯಾ. ಅಜಯ್ ರಸ್ತೋಗಿ ಒಳಗೊಂಡ ದ್ವಿಸದಸ್ಯ ಪೀಠ, ಮೂರು ತಿಂಗಳಲ್ಲಿ ಕೋರ್ಟ್ ತೀರ್ಪನ್ನು ಕೇಂದ್ರ ಸರ್ಕಾರ ಜಾರಿಗೆ ತರಬೇಕು ಮತ್ತು ಮಹಿಳೆಯರಿಗೆ ಸೇನೆಯಲ್ಲಿ ಸಮಾನ ಅವಕಾಶ ಕಲ್ಪಿಸಬೇಕು ಎಂದು ನಿರ್ದೇಶನ ನೀಡಿದೆ.

» **ಮಹಿಳಾ ಅಧಿಕಾರಿಗಳಿಗೆ ಪರ್ಮನೆಂಟ್ ಕಮಿಷನ್ ನಿಯಮ ಅನ್ವಯ**

2010ರ ದೆಹಲಿ ಹೈಕೋರ್ಟ್ ತೀರ್ಪಿಗೆ ಸುಪ್ರೀಂಕೋರ್ಟ್ ತಡೆ ನೀಡಿರಲಿಲ್ಲ. '2010ರ ದೆಹಲಿ ಹೈಕೋರ್ಟ್ ತೀರ್ಪಿಗೆ ಸುಪ್ರೀಂಕೋರ್ಟ್ ತಡೆ ನೀಡಿರಲಿಲ್ಲ. ಹಾಗಿದ್ದರೂ, ಕೇಂದ್ರ ಸರ್ಕಾರ ಮಹಿಳಾ ಅಧಿಕಾರಿಗಳಿಗೆ ಅನುಕೂಲವಾಗಬಲ್ಲ ನಿಯಮ ರೂಪಿಸದಿರುವುದು ಮಹಿಳೆಯರ ಕುರಿತ ನಿಮ್ಮ ಪೂರ್ವಾಗ್ರಹ ಮನಸ್ಥಿತಿಯನ್ನು ಬಯಲುಗೊಳಿಸಿದೆ' ಎಂದು ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

2010ರ ತೀರ್ಪಿಗೆ ಅನ್ವಯವಾಗಿ 2019ರಲ್ಲಿ ಹೊಸ ನಿಯಮವನ್ನು ಕೇಂದ್ರ ತಂದಿತ್ತು. ಸಿಗ್ನಲ್ಸ್, ಎಂಜಿನಿಯರ್ಸ್, ಆರ್ಮಿ ಏವಿಯೇಷನ್, ಆರ್ಮಿ ಏರ್ ಡಿಫೆನ್ಸ್, ಎಲೆಕ್ಟ್ರಾನಿಕ್ಸ್ ಅಂಡ್ ಮೆಕ್ಯಾನಿಕಲ್ ಎಂಜಿನಿಯರ್ಸ್, ಆರ್ಮಿ ಸರ್ವಿಸ್ ಕೋರ್, ಆರ್ಮಿ ಆರ್ಡಿನೆನ್ಸ್ ಕೋರ್ ಅಂಡ್ ಇಂಟೆಲಿಜೆನ್ಸ್ ಸೇರಿ ಒಟ್ಟು 8 ವಿಭಾಗಗಳನ್ನು ಮಹಿಳೆಯರಿಗೆ ಸಂಬಂಧಿಸಿದ ಪರ್ಮನೆಂಟ್ ಕಮಿಷನ್‌ನಲ್ಲಿ ಸೇರಿಸಿತ್ತು. ಅದಕ್ಕೂ ಮುನ್ನ, ಪರ್ಮನೆಂಟ್ ಕಮಿಷನ್‌ನ ಜಡ್ಜ್ ಅಡ್ವೊಕೇಟ್ ಜನರಲ್ (ಜೆಎಜಿ) ಮತ್ತು ಆರ್ಮಿ ಎಜುಕೇಷನ್ ಕೋರ್ (ಎಇಸಿ) ವಿಭಾಗಗಳಲ್ಲಿ ಮಾತ್ರ ಮಹಿಳಾ ಅಧಿಕಾರಿಗಳಿಗೆ ಸೇವೆ ಸಲ್ಲಿಸಲು ಅವಕಾಶವಿತ್ತು.

ಮುಂದಿನ ಪುಟ 6



ಶಾರ್ಟ್ ಸರ್ವಿಸ್ ಕಮಿಷನ್‌ನ ಮಹಿಳಾ ಅಧಿಕಾರಿಗಳಾದ ಅಂಜಲಿ ಬಿಶ್ತ್, ಸೀಮಾ ಸಿಂಗ್ ಹಾಗೂ ಸಂಧ್ಯಾ ಯಾದವ್ ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ಸಂಭ್ರಮಿಸಿದರು.

## ಪರಿಣಾಮಗಳೇನು?

- ಆದೇಶದಿಂದ ದೇಶದ ಯುವತಿಯರಿಗೆ ಉದ್ಯೋಗದ ಹೊಸ ಹಾದಿ ತೆರೆದಿದೆ
- ಕರ್ನಲ್ ಮತ್ತು ಅದಕ್ಕಿಂತ ಉನ್ನತ ಹುದ್ದೆಗಳಿಗೂ ಮಹಿಳೆಯರನ್ನು ಪರಿಗಣಿಸಬಹುದಾಗಿದೆ, ಭವಿಷ್ಯದಲ್ಲಿ ಮಹಿಳಾ ಉನ್ನತಾಧಿಕಾರಿಯೊಬ್ಬರು ಸೇನಾ ಮುಖ್ಯಸ್ಥರಾದರೂ ಅಚ್ಚರಿಯಿಲ್ಲ

## ಯಾರಿಗೆ ಅನ್ವಯ

ಸುಪ್ರೀಂ ತೀರ್ಪಿನಿಂದಾಗಿ ಶಾರ್ಟ್ ಸರ್ವಿಸ್ ಕಮಿಷನ್‌ನಿಂದ ಪರ್ಮನೆಂಟ್ ಕಮಿಷನ್ ವ್ಯಾಪ್ತಿಗೆ ಮಹಿಳಾ ಅಧಿಕಾರಿಗಳು ಬರಲಿದ್ದಾರೆ. ಸದ್ಯ ಆರ್ಮಿಯಲ್ಲಿರುವ ಮಹಿಳಾ ಅಧಿಕಾರಿಗಳಿಗೂ ಹೊಸ ನಿಯಮ ಅನ್ವಯವಾಗಲಿದೆ.

## ಆದೇಶದ ಮುಖ್ಯಾಂಶ

- ಎಸ್‌ಎಸ್‌ಸಿ ಮೂಲಕ ನೇಮಕಗೊಂಡ ಎಲ್ಲ ಮಹಿಳಾ ಅಧಿಕಾರಿಗಳನ್ನು ಪರ್ಮನೆಂಟ್ ಕಮಿಷನ್‌ಗೆ ಪರಿಗಣಿಸಬೇಕು
- ಪರ್ಮನೆಂಟ್ ಕಮಿಷನ್ ಆಯ್ಕೆ ಮಾಡಿಕೊಳ್ಳದಿದ್ದರೆ ಅವರಿಗೆ ತಮ್ಮ ಸೇವಾ ಅವಧಿಯನ್ನು 20 ವರ್ಷಕ್ಕೆ ವಿಸ್ತರಿಸಲು ಅವಕಾಶ ಕೊಡಬೇಕು
- ಎಸ್‌ಎಸ್‌ಸಿಯಲ್ಲಿ ನೇಮಕವಾಗಿ 20 ವರ್ಷಕ್ಕಿಂತ ಹೆಚ್ಚು ಅವಧಿಗೆ ಸೇವೆ ಸಲ್ಲಿಸುತ್ತಿರುವ ಮಹಿಳಾ ಅಧಿಕಾರಿಗಳು ಪಿಂಚಣಿಗೆ ಅರ್ಹರು
- ಪರ್ಮನೆಂಟ್ ಕಮಿಷನ್‌ನಲ್ಲಿ ಕಮಾಂಡ್ ಶ್ರೇಣಿಯ ಹುದ್ದೆಗಳಿಗೂ ಮಹಿಳಾ ಅಧಿಕಾರಿಗಳನ್ನು ಪರಿಗಣಿಸಬೇಕು